ಓ.ಎಸ್ 231/2017 ಪಿ.ಡಬ್ಲ್ಯೂ-1

ಸಾಕ್ಷಿಯನ್ನು ದಿನಾಂಕ 18-09-2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಶ್ರೀ ಎಂ ಬಿ ಎನ ವಕೀಲರಿಂದ ಪ್ರತಿವಾದಿ 3,9,12 ಮತ್ತು 13 ರ ಪರವಾಗಿ ಪಾಟೀ ಸವಾಲುಃ-**

ನಾನು ಎಂ ಎ, ಬಿ.ಎಡ. ಪದವಿ ಮುಗಿಸಿದ್ದೇನೆ. ದಿನಾಂಕ 07-01-1937 ರಂದು ಜನನಿದ್ದೇನೆ. ನನ್ನ ತಂದೆ ಮೂಲತಃ ಬೀಳಗಿ ತಾಲ್ಲೂಕು ಬಿಸನಾಳ ಗ್ರಾಮದವರು ಎಂದರೆ ಹೌದು. ಆ ಬಿಸನಾಳ ಗ್ರಾಮದಲ್ಲಿ ನನ್ನ ತಂದೆಗೆ ಸೇರಿದ ಯಾವುದೇ ಆಸ್ತಿ ಇಲ್ಲ ಎಂದರೆ ಹೌದು. ನನ್ನ ತಂದೆ ವ್ಯವಹಾರ ಮಾಡಲೆಂದು ಹುಬ್ಬಳ್ಳಿಗೆ ಬಂದಿದ್ದರು ಎಂದರೆ ಹೌದು. ನನ್ನ ತಂದೆ ಹುಬ್ಬಳ್ಳಿಯಲ್ಲಿ ಬಾಳೆಹಣ್ಣಿನ ವ್ಯಾಪಾರ ಮಾಡುತ್ತಿದ್ದರು ಎಂದರೆ ಹೌದು. ನನ್ನ ತಂದೆ ಆ ವ್ಯಾಪಾರದಿಂದ ಬಂದ ಆದಾಯದಿಂದ ದಿನಾಂಕ 28-07-1942 ರಂದು ಸರ್ವೆ ನಂ.79 ರಲ್ಲಿ 17 ಎಕರೆ 10 ಗುಂಟೆ ಖರೀದಿ ಮಾಡಿದರು ಎಂದರೆ ಹೌದು. ಅದೇ ರೀತಿ 9 ಎಕರೆ ಜಮೀನನ್ನು 19-11-1948 ರಂದು ಖರೀದಿ ಮಾಡಿದರು ಎಂದರೆ ಹೌದು. ಅದೇ ರೀತಿ ದೇಶಪಾಂಡೆ ನಗರದಲ್ಲಿರುವಂತಹ ಮನೆಯನ್ನು ನನ್ನ ತಂದೆ ದಿನಾಂಕ 22-03-1943 ರಂದು ಖರೀದಿ ಮಾಡಿದ್ದಾರೆಂದರೆ ಹೌದು.

2. ನನ್ನ ಮದುವೆಯಾಗಿ 52 ವರ್ಷವಾಗಿದೆ. ಮದುವೆಯಾದ ನಂತರ ನನ್ನ ತಂದೆ ತಾಯಿ ಮನೆಗೆ ಬಂದು ಹೋಗಿ ಮಾಡುತ್ತಿದ್ದೆ ಎಂದರೆ ಹೌದು. ನನ್ನ ತಂದೆ ದಿನಾಂಕ 24-03-1984 ರಂದು ಮರಣ ಹೊಂದಿದ್ದಾರೆಂದರೆ ಹೌದು. ಈ ಮೇಲೆ ಹೇಳಿದಂತಹ ಎಲ್ಲಾ ಆಸ್ತಿಗಳು ನನ್ನ ತಂದೆಯೇ ಖರೀದಿ ಮಾಡಿದಂತಹ ಆಸ್ತಿಗಳು ಎಂದರೆ ಹೌದು. ಸದರಿ ಆಸ್ತಿಗಳನ್ನು ನನ್ನ ತಂದೆ ಸ್ವಂತ ದುಡಿದು ಖರೀದಿ ಮಾಡಿದ್ದು ಎಂದರೆ ಸಾಕ್ಷಿ ನನ್ನ ತಾಯಿ ಸಹ ದುಡಿದಿದ್ದಾಳೆ. ನನ್ನ ತಾಯಿಯ ಹೆಸರಿನಲ್ಲಿರುವಂತಹ ಆಸ್ತಿಯ ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ತಾಯಿ ದುಡಿಮೆ ಮಾಡುತ್ತಿದ್ದಳು ಎಂದು ತೋರಿಸಲು ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ತಾಯಿ ಶಾಲೆ ಕಲಿತಿಲ್ಲ ಅವರು ಮನೆ ಕೆಲಸ ಮಾಡಿಕೊಂಡು ಹೊಲದ ಕೆಲಸ ಸಹ ಮಾಡುತ್ತಿದ್ದರು. ನನ್ನ ತಂದೆ ಮರಣ ಹೊಂದುವ ಮೊದಲು ಪಾರ್ಶ್ವವಾಯು ಕಾಯಿಲೆಯಿಂದ ಬಳಲುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರಪಡಿಸಿಲ್ಲ ನಾವು ಆಸ್ಪತ್ರೆಯಲ್ಲಿ ಕೇಳಿದೆವು ಅವರು ಕೊಟ್ಟಿಲ್ಲ. ಆ ರೀತಿ

ವಿವೇಕಾನಂದ ಆಸ್ಪತ್ರೆಯಲ್ಲಿ ದಾಖಲೆ ಬೇಕು ಅಂತಾ ಕೊಟ್ಟಂತಹ ಅರ್ಜಿಯಜ ಪ್ರತಿಯಾಗಲೀ ಮತ್ತು ಅವರು ಕೊಟ್ಟಿಲ್ಲ ಎಂದು ತೋರಿಸುದಕ್ಕಾಗಲೀ ದಾಖಲೆ ಹಾಜರಪಡಿಸಿಲ್ಲ. ನನ್ನ ತಂದೆ ಮರಣ ಹೊಂದುವವರಿಗೆ ಅವರು ಆರೋಗ್ಯವಾಗಿದ್ದರೂ ಸಹ ಈಗ ಆರೋಗ್ಯವಾಗಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ನನ್ನ ತಂದೆ ತನ್ನ ಜೀವಿತ ಕಾಲದಲ್ಲಿ ತನ್ನ ಆಸ್ತಿ ಯಾರಿಗೆಲ್ಲಾ ಹೋಗಬೇಕೆಂದು ದಿನಾಂಕ 05-09-1983 ರಂದು ಮೃತ್ಯುಪತ್ರವನ್ನು ಮಾಡಿಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ ಮತ್ತು ಅವರಿಗೆ ಆರೋಗ್ಯ ಸರಿ ಇರಲಿಲ್ಲ. ಆ ಮೃತ್ಯು ಪತ್ರದಲ್ಲಿ ತನ್ನ ಆಸ್ತಿ ಗಂಡು ಮಕ್ಕಳಿಗೆ ಹೋಗಬೇಕು ಹೆಣ್ಣು ಮಕ್ಕಳಿಗೆ ತಲಾ 5 ಸಾವಿರ ರೂ. ಕೊಡಬೇಕೆಂದು ಬರೆದಿದ್ದಾರೆಂದರೆ ಅದು ನನಗೆ ಗೊತ್ತಿಲ್ಲ ಆದರೆ ಅವರಿಗೆ ಬೇಕಾದ ರೀತಿಯಲ್ಲಿ ಮಾಡಿಕೊಂಡಿದ್ದಾರೆಂದು ಸಾಕ್ಷಿ ನುಡಿಯುತ್ತಾರೆ. ಗುರುಸಿದ್ದವ್ವಗೆ ವಾಸಮಾಡಲು ಆಕೆಯ ಜೀವಿತದವರಿಗೆ ಅದು ಸಣ್ಣ ಕೊಣೆಯನ್ನು ಕೊಡಬೇಕೆಂದು ಮೃತ್ಯುಪತ್ರದಲ್ಲಿ ಬರೆದಿದ್ದಾರೆಂದರೆ ಅದು ನನಗೆ ಗೊತ್ತಿಲ್ಲ.

3. ನನಗೆ ಸೇರಿದ ಒಂದು ನಿವೇಶನ ಹುಬ್ಬಳ್ಳಿಯಲ್ಲಿದೆ ಎಂದರೆ ಹೌದು. ಅದೇ ರೀತಿ ಆ ಮೃತ್ಯುಪತ್ರದಲ್ಲಿ ಹುಬ್ಬಳ್ಳಿಯಲ್ಲಿರುವ ನನ್ನ ನಿವೇಶನದಲ್ಲಿ ಮನೆಯನ್ನು ಕಟ್ಟಿಸಿಕೊಳ್ಳಲು 10,000 ರೂ. ನನಗೆ ಕೊಡಬೇಕೆಂದು ಸಹ ಬರೆದಿದ್ದಾರೆಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಪತ್ರವನ್ನು ತೋರಿಸಿ ಇದು ನಿನ್ನ ಸಹಿ ಎಂದು ಕೇಳಲಾಗಿ ಆಕೆ ಅಲಗಳೆದಿರುತ್ತಾಳೆ. ಆ ಮೃತ್ಯುಪತ್ರದ ಪ್ರಕಾರ ದಿನಾಂಕ 15-05-1989 ರಂದು ಪ್ರತಿವಾದಿ 1 ರಿಂದ 5 ರ ತಂದೆ ಗುರುಸಿದ್ದಪ್ಪ ಪ್ರತಿವಾದಿ 9,12,13 ರವರು ನನಗೆ ರೂ.10,000/- ಹಣ ನೀಡಿದ್ದಾರೆಂದರೆ ಸರಿಯಲ್ಲ. ಅದಕ್ಕೆ ನಾನು ನಮ್ಮ ತಂದೆಯ ಇಚ್ಛೆಯನ್ನು ಪೂರೈಸಿದಕ್ಕೆ ಅಭಿನಂದನೆ ಎಂದು ನಾನು ವರಿಗೆ ಅಭಿನಂದನಾ ಪತ್ರ ಬರೆದಿದ್ದೇನೆಂದರೆ ಸರಿಯಲ್ಲ ತಮಗೆ ಬೇಕಾದ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ಆ ಮೃತ್ಯುಪತ್ರದಂತೆ ನನ್ನ ಎಲ್ಲಾ ಸಹೋದರ ಸಹೋದರಿಯರು ನಡೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ಇಚ್ಛೆಯಂತೆ ನನಗೆ ಹತ್ತು ಸಾವಿರ ಹಣವನ್ನು ಕೊಟ್ಟಿದ್ದು ಮತ್ತು ನಾನು ಅದಕ್ಕೆ ಅಭಿನಂದನಾ ಪತ್ರ ಬರೆದಿದ್ದರೂ ಸಹ ಈಗ ಹಣ ಕೊಟ್ಟಿಲ್ಲ ಮತ್ತು ಮೃತ್ಯುಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣ ಹೊಂದಿದ ನಂತರ 1987-88 ರಲ್ಲಿ ಪ್ರತಿವಾದಿಯರು ಮಾಲೀಕರಾನಾದ ನಂತರ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ನನಗೆ ಮೃತ್ಯುಪತ್ರದ ಬಗ್ಗೆ ಗೊತ್ತಿಲ್ಲ ಮತ್ತು ನಮ್ಮ ತಂದೆ ಪಾರ್ಶ್ವವಾಯುವಿನಿಂದ

ಬಳುತ್ತಿದ್ದರು ಮತ್ತು ದಾಖಲೆಗಳು ಎಲ್ಲಾ ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ಎಲ್ಲಾ ಗೊತ್ತಿದ್ದರೂ ಸಹ ನಾನು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಹೆಚ್ಚಿನ ಪಾಟೀ ಸವಾಲಿಗೆ ವೇಳೆ ಕೇಳಿ ಪ್ರಕರಣ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆಎಂಎಫ್ ಸಿ , ಹುಬ್ಬಳ್ಳಿ